**p ಓ.ಎಸ್.ನಂಬ್ರ: 239/2009** **ಪಿ.ಡಬ್ಲ್ಯೂ: 1**

ದಿನಾಂಕ: 20-12-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲು: ಪ್ರತಿವಾದಿ ಪರ ವಕೀಲರಾದ ಶ್ರೀ. ಸಿ ಆರ್ ಪಿ ರವರಿಂದ

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ಅಂಗಡಿ ನಡೆಸುತ್ತಿದ್ದೇನೆ. ವಾದಿ ವಿದೇಶದಲ್ಲಿದ್ದಾರೆ, ಎಲ್ಲಿ ಎಂದು ಗೊತ್ತಿಲ್ಲ. 2009 ರಲ್ಲಿಯೂ ಕೂಡ ವಾದಿಯು ವಿದೇಶದಲ್ಲಿ ಇದ್ದರು. ವಾದಿಯು ಒಂದು ಮದುವೆಗೆ ಬಂದಿದ್ದಾಗ ನನಗೆ ಜಿ ಪಿ ಎ ಕೊಟ್ಟಿರುತ್ತಾರೆ, ಯಾರ ಮದುವೆಗೆ ಎಂದು ನನಗೆ ಗೊತ್ತಿಲ್ಲ. 2009 ರಲ್ಲಿ ಜಿ ಪಿ ಎ ಗೆ ಸಹಿ ಮಾಡಿರುತ್ತಾರೆ. ವಾದಿ ಜಿ ಪಿ ಎ ಗೆ ಸಹಿ ಮಾಡುವಾಗ ನಾನು ಇದ್ದ ಬಗ್ಗೆ ನೆನಪಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಎ ಶೆಡ್ಯೂಲ ಎಂದು ತಿಳಿಸಿದ್ದು, ಅದರ ಸರ್ವೆ ನಂ. 217/3, 20 ಸೆಂಟ್ಸ ಆಗಿರುತ್ತದೆ. ಎ ಶೆಡ್ಯೂಲ ಸ್ವತ್ತು ವಾದಿಗೆ ಬಂದ ಬಗ್ಗೆ ದಾಖಲೆಯನ್ನು ವಕೀಲರಿಗೆ ನೀಡಿರುತ್ತೇನೆ, ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ದಾಖಲೆ ಯಾವ ವರ್ಷದ್ದು ಎಂದು ಗೊತ್ತಿಲ್ಲ. ಆ ದಾಖಲೆಯಲ್ಲಿ ಜಾಗದ ವಿಸ್ತೀರ್ಣ ಪೂರ್ತಿಯಾಗಿ ಇದೆ. ಆ ದಾಖಲೆ ಪ್ರಕಾರ ಪಹಣಿ ಆಗಿದೆಯಾ ಎಂದರೆ ನಾನು ನೋಡಿಲ್ಲ.

ನಿ.ಪಿ.2 ರ ಪಹಣಿಯಲ್ಲಿ ವಾದಿಯ ಹೆಸರಿನಲ್ಲಿ 20 ಸೆಂಟ್ಸ ನಮೂದಾಗಿಲ್ಲ. ಎ ಶೆಡ್ಯೂಲನ ಉತ್ತರಕ್ಕೆ ಮತ್ತು ಪೂರ್ವಕ್ಕೆ ಜಯವಂತ ಕಾಮತ್ ರವರ ಸ್ಥಳ ಇದೆ. ದಕ್ಷಿಣಕೆ ರಸ್ತೆ ಇದೆ ಮತ್ತು ಪಶ್ಚಿಮಕ್ಕೆ ಪ್ರತಿವಾದಿಯ ಜಾಗ ಇದೆ. ನಿ.ಪಿ.3 ರ ಕ್ರಯ ಪತ್ರದ ಪ್ರಕಾರ ಬಿ ಶೆಡ್ಯೂಲ ಸ್ವತ್ತು ಪ್ರತಿವಾದಿಗೆ ಬಂದಿದೆ ಎಂದರೆ ಸರಿ. ಬಿ ಶೆಡ್ಯೂಲ ಸ್ವತ್ತು ಸಂಪೂರ್ಣವಾ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿ. ಎ ಶೆಡ್ಯೂಲ ಸ್ವತ್ತು ವಾದಿಯ ಸ್ವಾಧೀನದಲ್ಲಿದೆ ಎಂದು ತೋರಿಸಲು ದಾಖಲೆ ಇದೆ, ಆ ದಾಖಲೆಯನ್ನು ಹಾಜರುಪಡಿಸಿಲ್ಲ, ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಬಿ ಶೆಡ್ಯೂಲ ಆಸ್ತಿಯ ಉತ್ತರಕ್ಕೆ ಜಯವಂತ ಕಾಮತ್ ಮತ್ತು ನನ್ನ ತಂದೆಯ ಸ್ಥಳ ಇದೆ. ಪಶ್ಚಿಮಕ್ಕೆ ನಮ್ಮದೆ ಸ್ಥಳ. ಪೂರ್ವಕ್ಕೆ ಎ ಶೆಡ್ಯೂಲ ಆಸ್ತಿ. ದಕ್ಷಿಣಕ್ಕೆ ರಸ್ತೆ ಇದೆ.

2015 ರಲ್ಲಿ ಎ ಶೆಡ್ಯೂಲ ಆಸ್ತಿಯನ್ನು ಪ್ರತಿವಾದಿ ಅತಿಕ್ರಮಣ ಮಾಡಿದ್ದಾರೆ ಎಂದು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಎಷ್ಟು ವಿಸ್ತೀರ್ಣ ಅತೀಕ್ರಮಣ ಮಾಡಿದ್ದಾರೆ ಎಂದರೆ ನಾವು ಅಳತೆ ಮಾಡಿಸಿಲ್ಲ. ಎ ಶೆಡ್ಯೂಲ ಆಸ್ತಿಯನ್ನು ಅಳತೆ ಮಾಡಿಸಿದ್ದಿರಾ ಎಂದರೆ ನೆನಪಿಲ್ಲ. ಎ ಶೆಡ್ಯೂಲ ಪೋಡಿಯಾಗಿರುವುದಿಲ್ಲ. ಎ ಶೆಡ್ಯೂಲ ಸ್ವತ್ತಿನಲ್ಲಿ ಹಳೆ ಕಟ್ಟಡ ಮತ್ತು ಖಾಲಿ ಜಾಗ ಇದೆ. ಆ ಹಳೆ ಕಟ್ಟಡ ಈಗ ಅರ್ಧ ಬಿದ್ದುಹೋಗಿರುತ್ತದೆ.

ಮೊದಲು ಅದರ ಡೋರ್ ನಂ. 227 ಎಂದು ಇತ್ತು. ಆ ಹಳೆ ಕಟ್ಟಡ ವಾದಿಯ ಹೆಸರಿನಲ್ಲಿ ಪಂಚಾಯತಿ ದಾಖಲೆಗಳಲ್ಲಿ ಇತ್ತು. ಕುಟುಂಬದ ಪರವಾಗಿ ವಾದಿಯ ಹೆಸರಿನಲ್ಲಿ ಇತ್ತು.

ಎ ಮತ್ತು ಬಿ ಶೆಡ್ಯೂಲ ನಡುವೆ ಗಡಿ ತೋರಿಸುವ ಯಾವುದೇ ನಿಶಾನೆ ಇರುವುದಿಲ್ಲ. ಬಿ ಶೆಡ್ಯೂಲ ಸ್ವತ್ತಿನಲ್ಲಿ ಪ್ರತಿವಾದಿಗಳ ಕಟ್ಟಡ ಇದೆ ಎಂದರೆ ಸರಿ. ನಾನು ಪ್ರತಿವಾದಿಗಳ ವಿರುದ್ಧ ಓ ಎಸ್ 210/2009 ರಂತೆ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಆ ದಾವೆಯಲ್ಲಿ ಕೂಡ ಇತ್ತೀಚೆಗೆ ವಾದ ಪತ್ರದಲ್ಲಿ ತಿದ್ದುಪಡಿ ಮಾಡಿರುತ್ತೇವೆ ಎಂದರೆ ಸರಿ. ಆ ತಿದ್ದುಪಡಿಯಲ್ಲಿ ಏನು ಹೇಳಿದ್ದೇವೆ ಎಂದು ನೆನಪಿಲ್ಲ. ಆ ತಿದ್ದುಪಡಿಯಲ್ಲಿ ಪ್ರತವಾದಿ 2015 ರಲ್ಲಿ ಕಟ್ಟಡ ಪುನರ್ ನಿರ್ಮಾಣ ಮಾಡಿದ್ದಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. 2015 ರಿಂದ 2024 ರವರೆಗೆ ತಿದ್ದುಪಡಿಗಾಗಿ ಈ ದಾವೆಯಲ್ಲಿ ಅರ್ಜಿ ಸಲ್ಲಿಸದೇ ಇರಲು ಯಾವುದೆ ಕಾರಣ ಇರಲಿಲ್ಲ. ವಾದಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ. ವಾದಪತ್ರದಲ್ಲಿ ವರ್ಣಿಸಿರುವಂತೆ ಎ ಶೆಡ್ಯೂಲ ಆಸ್ತಿ ವಾದಿಗೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ಕಲ್ಪಿಸಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ